ಜನರ್ ಲೆವೆಲ್‌ನಲ್ಲಿ ವಿಜಿಲೆನ್ಸ್ ಸ್ಕ್ವಾಡ್ ಇದೆ. ಸಾಧಾರಣವಾಗಿ ಈ ಸ್ಕ್ವಾಡ್ ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚುತ್ತದೆ. ೧೯೭೭-೭೮ರಲ್ಲಿ ೨೭೦ ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ. ದಂಡ ಹಾಕುವುದಲ್ಲದೆ, ನ್ಯಾಯಾಲಯಗಳಲ್ಲಿ ಮೊಕದ್ದಮ್ಮೆ ಕೂಡ ನಡೆಯುತ್ತಿವೆ. ಅಧಿಕಾರಿಗಳು ಶಂಕಿತ ತಕ್ಕ ಸಂದರ್ಭದಲ್ಲಿ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗಿದೆ.

SRI PRABHAKAR TELKAR.—Has it come to the notice of the Government that in some cases without giving notice or drawing panchanama the officials have disconnected power ? I have already brought to the notice of the Hon. Minister that in one case instead of asking the party to pay Rs. 250/- they have charged penalty of Rs. 4,000. Some of the agriculturists who have only 2½ acres of land have been put to loss. May I know whether a direction will be given to the officials to take proper action in this regard ?

SRI K. H. SRINIVAS.—This is regarding a particular case which the hon. Member has brought to my notice and I have asked the concerned officer to immediately give me a report. On the basis of the report if I find that there is any irregularity or illegal action taken by the officers, then I will certainly give necessary directions.

ಶ್ರೀ ಬಿ. ಎಂ. ಲಕ್ಷ್ಮಣಯ್ಯ.—ಕರ್ನಾಟಕ ರಾಜ್ಯದಲ್ಲಿ ೪೫೪೪ ಮಿಲಿಯನ್ ಯೂನಿಟ್ಸ್ ವಿದ್ಯುತ್ ಉತ್ಪನ್ನವಾಗುತ್ತದೆಂದು ಹೇಳಿದ್ದೀರಿ. ಕರ್ನಾಟಕ ರಾಜ್ಯಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸುಮಾರು ೮ ಸಾವಿರ ಮಿಲಿಯನ್ ಯೂನಿಟ್ಸ್ ಬೇಕಾಗುತ್ತದೆ.

Vacant Teachers posts in Kunigal and Pavagada Taluks

584. SRI G. S. SHIVANANJAPPA (Bellavi).—Will the Minister for Education be pleased to state.—

(*a*) the number of posts of teachers vacant in Kunigal and Pavagada taluks ;

(*b*) whether Government is a ware that students are being put to hardship for want of teachers in the said talukas ?

SRI B. SUBBAYYA SHETTY (Minister for Education).—

(*a*) Kunigal Taluk 85, Pavagada Taluk 64.

(*b*) Yes.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರ ಹೌದು ಅಂತ ಹೇಳಿದ್ದೀರಿ? ಶಾಲೆಗಳು ಪ್ರಾರಂಭವಾಗಿ ೩-೪ ತಿಂಗಳಾಗಿದೆ. ಉಪಾಧ್ಯಾಯರ ಕೊರೆತೆಯನ್ನು ಇನ್ನು ಯಾವಾಗ ಸರಿಪಡಿಸುತ್ತೀರಿ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಈ ಮಾನ್ಯ ಸಭೆಯಲ್ಲಿ ಈಗಾಗಲೇ ಹೇಳಿದ್ದೇನೆ. ಏನೆಂದರೆ, ಆದಷ್ಟು ಶೀಘ್ರವಾಗಿ ಖಾಲಿ ಇರತಕ್ಕ ಉಪಾಧ್ಯಾಯರ ಜಾಗಗಳನ್ನು ತುಂಬಲಾಗುವುದೆಂದು ;